## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2020, ದಿನಾಂಕ:08-01-2020

2. ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2020, ದಿನಾಂಕ:19-02-2020

3. ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2020, ದಿನಾಂಕ:13-03-2020

* * * * *

ಪ್ರಸ್ತಾವನೆ:-

2019-20ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:30-3-2020ರಂದೇ 2019-20ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಮೇಲೆ (1), (2) & (3) ರಲ್ಲಿ ಓದಲಾದ ಆದೇಶಗಳಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು.

ವೇತನ / ವೇತನ ಬಾಕಿ ಬಿಲ್ಲುಗಳು/ಹಬ್ಬದ ಮುಂಗಡ ಬಿಲ್ಲು/ ಅನುದಾನಿತ ವೇತನ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ: 31-01-2020 ನಂತರ ಬಿಡುಗಡೆ ಆದೇಶಗಳನ್ನು ಹೊರಡಿಸಿ upload ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ ವಿಸ್ತರಿಸುವಂತೆ ಖಜಾನೆ ಆಯುಕ್ತರು ಕೋರಿರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2020, ಬೆಂಗಳೂರು, ದಿನಾಂಕ:20-03-2020**

ದಿನಾಂಕ:31-01-2020ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ ಈಗಾಗಲೇ ದಿನಾಂಕ:13.03.2020ರ ಆದೇಶದಲ್ಲಿ ವಿಸ್ತರಿಸಿ ನಿಗಧಿಪಡಿಸಿರುವ ದಿನಾಂಕವನ್ನು ಈ ಕೆಳಗಿನಂತೆ ಪುನ: ವಿಸ್ತರಿಸಿ ಆದೇಶಿಸಿದೆ.

| ಬಿಲ್ಲುಗಳ ಸ್ವರೂಪ/ವಿವರಗಳು | ದಿ:13/03/2020ರ ಆದೇಶದ ಪ್ರಕಾರ ವಿಸ್ತರಿಸಿದ ದಿನಾಂಕ | | ವಿಸ್ತರಿಸಿರುವ ದಿನಾಂಕ |
|---|---|---|---|
| | ಹಣ ಬಿಡುಗಡೆ/ upload ಮಾಡಲು ಕಡೆಯ ದಿನಾಂಕ | ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ | ಹಣ ಬಿಡುಗಡೆ/ upload ಮಾಡಲು ಹಾಗೂ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ |
| 1) ವೇತನ/ವೇತನ ಬಾಕಿ ಬಿಲ್ಲುಗಳು/ಹಬ್ಬದ ಮುಂಗಡ ಬಿಲ್ಲು / ಅನುದಾನಿತ ವೇತನ ಬಿಲ್ಲುಗಳು | 17-03-2020 | 19-03-2020 | 24-03-2020 |

ಮೇಲ್ಕಂಡ ಬಿಲ್ಲುಗಳನ್ನು ಹೊರತುಪಡಿಸಿ, ಉಳಿದ ಬಿಲ್ಲುಗಳನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ:ಆಇ 01 ಬಿಪಿಇ 2020 ದಿನಾಂಕ:08.01.2020ರಲ್ಲಿ ನಿಗಧಿಗೊಳಿಸಲಾಗಿದ್ದ ಕಾಲಮಿತಿಯು ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

20/3/2020

(ಹೆಚ್.ಎ.ಶೋಭ)

ಸರ್ಕಾರದ ಉಪ ಕಾರ್ಯದರ್ಶಿ

(ಎಫ್‌ಆರ್ ಮತ್ತು ಬಿಸಿಸಿ)

ಆರ್ಥಿಕ ಇಲಾಖೆ

ಇವರಿಗೆ:-

1) ಮಹಾಲೇಖಪಾಲರು (A&E)/(G&SSA)/(E&RSA), ಕರ್ನಾಟಕ, ಬೆಂಗಳೂರು.

2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

3) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

4) ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

5) ಸರ್ಕಾರದ ಎಲ್ಲಾ ಅಪರ/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.

8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-9.

10) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

11) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು.

12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

13) ಎಲ್ಲಾ ಇಲಾಖಾ ಮುಖ್ಯಸ್ಥರು.

14) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.